ದಂತಕತೆಗಳಿವೆ. ನಿಗೂಢ ಕಾರಣಕ್ಕೆ ಒಂಟಿಜೀವನ ಮಾಡಬೇಕಾದ ಲೇಖಕಿಯೊಬ್ಬರು ಮನೆ ತುಂಬ ನಾಯಿಗಳನ್ನು ಸಾಕಿಕೊಂಡು ಬದುಕಿದ ಕಥನವನ್ನು ಈಚೆಗೆ ಓದುತ್ತಿದ್ದೆ. ಅವರು ಉಯಿಲಿನಲ್ಲಿ ತಮ್ಮ ಸಮಾಧಿಗೆ ಮಣ್ಣನ್ನು ನಾಯಿಗಳೇ ಎಳೆದು ಹಾಕಬೇಕು ಎಂದು ಬರೆದಿದ್ದು ಓದಿ ಚಕಿತಗೊಂಡೆ. ಓಹ್! ನಾಯಿಗಳೇ ನೀವೆಷ್ಟು ಧನ್ಯರು.

ಮಿಟ್ಟುವನ್ನು ಕಳೆದುಕೊಂಡ ಕ್ಲೇಶದಲ್ಲಿ ನಾವಿನ್ನೂ ಇರುವಾಗಲೇ, ದೆಹಲಿಯಿಂದ ಪ್ರೊ. ದತ್ತಾತ್ರೇಯ ಎಂಬ ಪ್ರಾಧ್ಯಾಪಕರು ನಮ್ಮ ಸಂಸ್ಥೆಗೆ ಎರಡು ವರ್ಷದ ಮಟ್ಟಿಗೆ ಬಂದರು. ನಮ್ಮ ಕಾಲನಿಯಲ್ಲೆ ಮನೆಮಾಡಿದರು. ಆ ಹೊತ್ತಿಗೆ ಕಳ್ಳರನ್ನು ಹಿಡಿವ ಹೊಣೆಯಿಂದ ವಿಮುಖರಾದ ನೂರಾರು ನಾಯಿಗಳು ತಮ್ಮ ಒಡೆಯರಿಂದ ಸ್ವತಂತ್ರಗೊಂಡು, ಇಡೀ ಕಾಲನಿ ವಿವಿಧ ತಲೆಮಾರಿನ ಮತ್ತು ತಳಿಯ ಸೊಣಗಗಳಿಂದ ಗಿಜಿಗುಡುತ್ತಿತ್ತು. ದತ್ತ ಅವರು 'ಹೇ! ಏನ್ರೀ ಇದು? ಇಲ್ಲಿ ಇಷ್ಟೊಂದು ಡಾಗ್ಸು!' ಎಂದು ಸೋಜಿಗಪಟ್ಟರು. ನಾಯಿ ಬಗ್ಗೆ ತಿರಸ್ಕಾರವಿದ್ದ ಅವರಿಗೂ ಶ್ವಾನಪ್ರೇಮದ ಪಾಶವು ಸುತ್ತಿಕೊಂಡಿತು. ಒಂದು ದಿನ ಅವರು ಸ್ಕೂಲುತಪ್ಪಿಸಿ ಪೋಲಿ ತಿರುಗುವ ಮಗುವಿನಂತಿದ್ದ ಒಂದು ಪುಟ್ಟಮರಿ ಗೇಟಿನ ಬದಿ ಕುಳಿತಿದ್ದನ್ನು ಕಂಡು ಉಳಿದಿದ್ದ ಅನ್ನ ಬಡಿಸಿದರು. ಅದು ನೀಟಾಗಿ ತಿಂದು ನಾಲಗೆಯಿಂದ ಮುಸುಡಿ ನೆಕ್ಕಿಕೊಳ್ಳುತ್ತ ಕೃತಜ್ಞತೆಯಿಂದ ಅವರತ್ತ ಒಮ್ಮೆ ನೋಡಿದ್ದೇ ಅವರ ಅಂತಃಕರಣ ಕರಗಿಹೋಯಿತು. ಅದು ಅವರ ಸೆರಗನ್ನು ಹಿಡಿದು ಹೋದಲ್ಲಿ ಬಂದಲ್ಲಿ ಹಿಂಬಾಲಿಸತೊಡಗಿತು. 'ಕಳೆದ ಜನ್ಮದಲ್ಲಿ ನಿಮ್ಮ ಪ್ರೇಯಸಿ ಇರಬೇಕು. ಕೈಬಿಡಬೇಡಿ' ಎಂದು ನಾನು ಕಿಚಾಯಿಸುತ್ತಿದ್ದೆ. ಪ್ರೊಫೆಸರ್ ಅದಕ್ಕೆ ಬುರ್‍ರಿ ಎಂದು ಹೆಸರಿಟ್ಟರು. ರೇಬಿಸ್ ಇಂಜಕ್ಷನ್ ಕೊಡಿಸಿದರು. ಸಣ್ಣಕ್ಕಿಯನ್ನು ಹಾಲಲ್ಲಿ ಕುದಿಸಿ ಬಡಿಸಿದರು. ವಾರಕ್ಕೊಮ್ಮೆ ದಸ್‌ನಂಬರ್ ಬಿರಿಯಾನಿ ತರುತ್ತಿದ್ದರು. ಬುರ್‍ರಿಗೆ ಸಿಗುತ್ತಿದ್ದ ಉಪಚಾರ ಬೇರೆ ನಾಯಿಗಳಿಗಿರಲಿ, ನಮಗೇ ಅಸೂಯೆ ಹುಟ್ಟಿಸುವಂತಿತ್ತು. ಪ್ರಸಿದ್ಧ ಸಂಗೀತ ಕಲಾವಿದರ ಮನೆಗೊಮ್ಮೆ ಹೋಗಿದ್ದಾಗ, ಅವರ ಸೇವಕರು ನಾಯಿಗೆ ಪೌಡರ್ ಹಾಕಿ ಬಾಚಣಿಗೆಯಲ್ಲಿ ಕೂದಲು ಬಾಚುತ್ತ ಮಾಡುತ್ತಿದ್ದ ಉಪಚಾರ ಕಂಡು, ಮುಂದಿನ ಜನ್ಮವಿದ್ದರೆ ಇವರ ಮನೆಯಲ್ಲಿ ನಾಯಾಗಿ ಹುಟ್ಟಬೇಕು ಎಂದು ನನಗೆ ಅನಿಸಿದ್ದುಂಟು. ಅದನ್ನು ಜತೆಗೆ ಬಂದಿದ್ದ ಗೆಳೆಯರೊಬ್ಬರ ಮುಂದೆ ವ್ಯಕ್ತಪಡಿಸಿದೆ. ಆಗವರು ಗಾಬರಿಯಿಂದ ಮನೆಯವರು ಇಲ್ಲದಾಗ ಮನೆಗೆಲಸದವಳು ಆ ನಾಯಿಗೆ ದಬ್ಬೆ ತೆಗೆದುಕೊಂಡು ಚಚ್ಚುವುದನ್ನು ಕಣ್ಣಾರೆ ಕಂಡಿದ್ದೇನೆಂದು ಹೇಳಿ, ನನ್ನ ಆಸೆಯ ಕುಡಿಯನ್ನು ಚಿವುಟಿಹಾಕಿದ್ದರು. ಆದರೂ ಬೀದಿನಾಯಿಗಳಿಗೆ ಚಿಕನ್ ಕಬಾಬ್ ಬಡಿಸುವ, ಕಾರಲ್ಲಿ ಒಯ್ಯುವ, ಹಾಸಿಗೆಯಲ್ಲಿ ಮಲಗಿಸಿಕೊಳ್ಳುವ ಕತೆಗಳನ್ನು ಕೇಳುವಾಗ ಅಸೂಯೆ ಹುಟ್ಟುತ್ತದೆ. ಈ ಹಿನ್ನೆಲೆಯಲ್ಲಿ ಪ್ರೊಫೆಸರ್ ಬುರ್‍ರಿಗೆ ಮಾಡುತ್ತಿದ್ದ ಷೋಡಶೋಪಚಾರವು ಎಲ್ಲೆ ಮೀರಿತ್ತು.

ಇದರ ಫಲಿತಾಂಶವೆಂದರೆ ಬುರ್‍ರಿ ಕೆಲವೇ ತಿಂಗಳಲಿ 'ಬುರಬುರ ಊದಿ ಗರಗರ ತಿರುಗುವ ಬೋಂಡ'ವಾದಳು; ಊರುಮಂಜಿನ ಕೆಂಗೆಂಪು ಬಣ್ಣದ ಅವಳ ದೇಹದಲ್ಲಿ ಕಪ್ಪುಮೂತಿ ಚೆಲುವನ್ನು ನಿರ್ಮಿಸಿತ್ತು. ಕಾಮನಬಿಲ್ಲಂತೆ ಬಾಗಿದ ಬಾಲಕ್ಕೆ ಚವರಿ ಕಟ್ಟಿದಂತೆ ರೋಮಗಳಿದ್ದವು. ಸೋಪಿನಿಂದ ಜಳಕ ಮಾಡಿಸಿದ ಮೈ ಲಕಲಕಿಸುತ್ತಿತ್ತು. ಪ್ರೊಫೆಸರ್ ಮನೆಗೆ ಬರುವುದನ್ನು ದೂರದಿಂದ ಕಂಡೊಡನೆ, ಬಾಣದಂತೆ ಬಂದು ಮೈಮೇಲೆಗರಿ ಏದುಸಿರುಬಿಡುತ್ತ ಆಕೆ ಒಲವು ಪ್ರಕಟಿಸುತ್ತಿದ್ದಳು. ಆಗವರ ಅಂಗಿ ನಾಯಿಯ ಕಾಲ್ಗುರುತಿನ